# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಪಿ.ಬಿ.ರಾಷ್ಟ್ರೀಯ ಹೆದ್ದಾರಿ-4, ಭೂತರಾಮನಹಟ್ಟಿ, ಬೆಳಗಾವಿ-591156

## RANI CHANNAMMA UNIVERSITY

Vidya Sangam, P.B.National Highway-04, Belagavi-591156

**ಕುಲಸಚಿವರ ಕಾರ್ಯಾಲಯ**

ಫೋನ್ ನಂ:0831-2565203/206/242 Website:www.rcub.ac.in

ಫ್ಯಾಕ್ಸ್ :0831-2565240 E-mail : rcuregistrar@gmail.com

ರಾಚವಿ/ಬೆಳಗಾವಿ/ಕುಸಕಾ/2021-22/ ದಿನಾಂಕ:06/05/2021

### -: ಐಟಂವಾರು ಟೆಂಡರ ಆಮಂತ್ರಣ ನೋಟೀಸು :-

(ಮ್ಯಾನುವಲ್ ಟೆಂಡರ್ ಪದ್ಧತಿ ಮೂಲಕ)

1) ಈ ಕೆಳಕಂಡ ಸೂಚಿಪಟ್ಟಿಯಲ್ಲಿ ವಿವರಿಸಲಾದ ಕಾಮಗಾರಿಯ ಗುತ್ತಿಗೆಯನ್ನು ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಸೂಕ್ತ ದರ್ಜೆಯ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ ಡಾಕ್ಯುಮೆಂಟ್ಸ ಕೆಡಬ್ಲ್ಯು-1 ರಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮದನ್ವಯ ಆಮಂತ್ರಿಸಲಾಗಿದೆ. ಗುತ್ತಿಗೆದಾರರು ಕೆಳಕಂಡ ಕಾಮಗಾರಿಗೆ ಗುತ್ತಿಗೆಯನ್ನು ಸಲ್ಲಿಸಬಹುದಾಗಿದೆ.

2) ಗುತ್ತಿಗೆದಾರರು ಗುತ್ತಿಗೆಯ ದಸ್ತಾವೇಜುವನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಟ್ಟಡ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರ ಕಚೇರಿಯಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಈ ಕೆಳಕಂಡ ಸೂಚಿ ಪಟ್ಟಿಯಲ್ಲಿ ಸೂಚಿಸಿದ ಬೆಲೆಯನ್ನು ನಗದು ಹಣ ಪಾವತಿಸಿ ಅಥವಾ **ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ,** ಇವರ ಹೆಸರಿನಲ್ಲಿ ಬೆಳಗಾವಿಯಲ್ಲಿ ಹಣ ಪಾವತಿ ಆಗುವಂತೆ ಬ್ಯಾಂಕರ್ಸ ಚಕ್/ಚನಲ್/ಡಿಮಾಂಡ ಡ್ರಾಫ್ಟ/ಪೇ ಆರ್ಡರ/ಪಾವತಿಸಿ ಖರೀದಿಸಬಹುದು (ಫಾರ್ಮ ಬೆಲೆಯನ್ನು ಯಾವುದೇ ಕಾರಣಕ್ಕೆ ಹಿಂದಿರುಗಿಸುವುದಿಲ್ಲ) ಆಸಕ್ತಿ ಹೊಂದಿರುವ ಗುತ್ತಿಗೆದಾರರು ಇದಕ್ಕಿಂತಲೂ ಹೆಚ್ಚಿನ ವಿವರಗಳನ್ನು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ, ಕಚೇರಿಯ ವೇಳೆಯಲ್ಲಿ ಹಾಗೂ ವಿಶ್ವವಿದ್ಯಾಲಯದ ವೇಬ್‌ಸೈಟ್‌ನಲ್ಲಿ www.rcub.ac.in ಪಡೆಯಬಹುದು. ಟೆಂಡರದಾರರ ಕೋರಿಕೆಯ ಮೇರೆಗೆ ಅಂಚೆ ವೆಚ್ಚ ರೂ.200/-ಗಳನ್ನು ಗುತ್ತಿಗೆದಾರರಿಂದ ಭರಣಾ ಮಾಡಿಕೊಂಡು ಟೆಂಡರ ದಸ್ತಾವೇಜುಗಳನ್ನು ರಜಿಸ್ಟರ್ಡ ಪೋಸ್ಟ ಎ.ಡಿ./ ಸ್ಪೀಡ ಪೋಸ್ಟ ಅಂಚೆಯ ಮೂಲಕ ಕಳುಹಿಸಲಾಗುವುದು. ಸದರಿ ಟೆಂಡರ ದಸ್ತಾವೇಜುಗಳು ಅಂಚೆಯಲ್ಲಿ ವಿಳಂಬದಿಂದ ಸರಿಯಾದ ಸಮಯದಲ್ಲಿ ಗುತ್ತಿಗೆದಾರರಿಗೆ ತಲುಪದೇ ಇದ್ದಲ್ಲಿ ಇದಕ್ಕೆ ಕುಲಸಚಿವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಇವರು ಹೊಣೆಗಾರರಾಗಿರುವದಿಲ್ಲ. ಇದಕ್ಕೆ ಸ್ವತ: ಗುತ್ತಿಗೆದಾರರೇ ಹೊಣೆಗಾರರಾಗುತ್ತಾರೆ.

~~3) ಈ ಕೆಳಗಿನ ಸೂಚಿಪಟ್ಟಿಯಲ್ಲಿ ಟೆಂಡರ ಕಾಮಗಾರಿಗೆ ನಿಗದಿಪಡಿಸಿದ ಮುಂಗಡ ಠೇವಣಿ ಹಣವನ್ನು **ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ,** ಇವರ ಹೆಸರಿನಲ್ಲಿ ಬೆಳಗಾವಿಯಲ್ಲಿ ಹಣ ಪಾವತಿ ಆಗುವಂತೆ ಬ್ಯಾಂಕರ್ಸ ಚಕ್/ಚನಲ್/ಡಿಮಾಂಡ ಡ್ರಾಫ್ಟ/ ಪೇ ಆರ್ಡರ /ಅಥವಾ **ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ,** ಇವರ ಹೆಸರಿನಲ್ಲಿ ಪ್ಲಜ್ ಮಾಡಿದ ಎನ್.ಎಸ್.ಸಿ ರೂಪದಲ್ಲಿ ಗುತ್ತಿಗೆ ಸಲ್ಲಿಸಿದ ದಿನಾಂಕದಿಂದ ಗುತ್ತಿಗೆದಾರರ ಗುತ್ತಿಗೆ ದರಗಳು ಚಲಾವಣೆಯಲ್ಲಿರುವ ಗುತ್ತಿಗೆ ಅವಧಿಗಿಂತ 45 ದಿನಗಳವರೆಗೆ ಹೆಚ್ಚಿನ ಅವಧಿಯವರೆಗೆ ಅಂದರೆ 135 ದಿನಗಳವರೆಗೆ ಚಲಾವಣೆಯಲ್ಲಿರುವಂತೆ ಟೆಂಡರದೊಂದಿಗೆ ಲಗತ್ತಿಸಿ ಸಲ್ಲಿಸಬೇಕು.~~

4) ಕೋವಿಡ್-19 ಸಾಂಕ್ರಾಮಿಕ ಹಿನ್ನಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ಆಇ675ವೆಚ್ಚ-12/2020,ಬೆಂಗಳೂರು, ದಿನಾಂಕ:22-12-2020. ರನ್ವಯ ದಿನಾಂಕ:31-12-2021ರ ವರೆಗೆ ಕರೆಯಲಾಗುವ ಟೆಂಡರಗಳಿಗೆ EMD ರಿಯಾಯಿತಿ ನೀಡಲಾಗಿದೆ. ಬದಲಾಗಿ ಟೆಂಡರನಲ್ಲಿ EMD Declaration ದಾಖಲೆ ಲಗತ್ತಿಸಬೇಕು.

5) ಟೆಂಡರಗಳನ್ನು ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಇವರ ಕಚೇರಿಯಿಂದ ಸ್ವೀಕರಿಸಲಾಗುವುದು. ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಇವರ ಕಚೇರಿಯಲ್ಲಿ ತೆರೆಯಲಾಗುವುದು. ಟೆಂಡರಗಳನ್ನು ಸ್ವೀಕರಿಸಲು ನಿಗದಿಪಡಿಸಿದ ದಿನಾಂಕದಂದು ಸಾರ್ವತ್ರಿಕ ರಜೆ ಸಂಭವಿಸಿದ ಪಕ್ಷದಲ್ಲಿ ಅದಕ್ಕೆ ಬದಲಾಗಿ ಮರುದಿನ ಕಚೇರಿ ಕೆಲಸದ ದಿನದಂದು ಈ ಮೇಲೆ ನಿಗದಿಪಡಿಸಿದ ಸಮಯಕ್ಕೆ ಮತ್ತು ಅದೇ ಸ್ಥಳದಲ್ಲಿ ಗುತ್ತಿಗೆಗಳನ್ನು ಸ್ವೀಕರಿಸಲಾಗುವದು ಮತ್ತು ತೆರೆಯಲಾಗುವುದು.

6) ಗುತ್ತಿಗೆದಾರರು ತಾಂತ್ರಿಕ ದಸ್ತಾವೇಜುಗಳನ್ನು ಒಂದು ಸೆಟ್ಟುಗಳಲ್ಲಿ ಕಟ್ಟಡ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರ ಕಚೇರಿಯಲ್ಲಿ ಒಪ್ಪಿಸಬೇಕು. ಹಾಗೂ ಟೆಂಡರ ತೆರೆಯುವ ದಿನದಂದು ಖುದ್ದಾಗಿ ಹಾಜರಾಗುವುದು.

7) ಇನ್ನಿತರ ವಿವರಗಳನ್ನು ಗುತ್ತಿಗೆದಾರರು ಟೆಂಡರ ದಸ್ತಾವೇಜುದಲ್ಲಿ ನೋಡಬಹುದು.

| | |
|---|---|
| 1)ಖುಲ್ಲಾ ಟೆಂಡರ ಫಾರ್ಮಗಳನ್ನು ಸ್ವೀಕರಿಸುವ ದಿನಾಂಕ: | 06–05–2021 ಸಾಯಂಕಾಲ 4–00 ಗಂಟೆಯವರೆಗೆ |
| 2)ಖಾಲಿ ಟೆಂಡರ ಫಾರ್ಮಗಳನ್ನು ನೀಡುವ ದಿನಾಂಕ: | 07–05–2021 ಸಾಯಂಕಾಲ 4–00 ಗಂಟೆಯವರೆಗೆ |
| 3)ಸೀಲ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ದಿನಾಂಕ: | 12–05–2021 ಅಪರಾಹ್ನ 3–00 ಗಂಟೆಯವರೆಗೆ |

## –: ಸೂಚಿ ಪಟ್ಟಿ :–

| ಕ್ರ ಸಂ. | ಕೆಲಸದ ಹೆಸರು | ಟೆಂಡರಿಗೆ ಇಟ್ಟಿರುವ ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ) | ಟೆಂಡರ ದಸ್ತಾವೇಜುಗಳ ಬೆಲೆ ರೂ.ಗಳಲ್ಲಿ | ಕಾಮಗಾರಿ ಮುಗಿಸುವ ಕಾಲಾವಧಿ (ಮಳೆಗಾಲ ಸೇರಿಕೊಂಡು) |
|---|---|---|---|---|
| **1.** | Providing Tiles for the Porch Portion and Cobble Stone for Extra Portion of Existing Road In Front of Administrative Building at RCU Belagavi. | **5.00** | **1,125/-** | **30 ದಿನಗಳು.** |

## ಸಾಮಾನ್ಯ ಶರತ್ತುಗಳು.

1. ಟೆಂಡರ್ ಪುಸ್ತಕದಲ್ಲಿ ಪೂರ್ವಾರ್ಹತೆ ಅವಶ್ಯಕತೆಗಳನ್ನು ವಿವರಿಸಲಾಗಿರುತ್ತದೆ. ಇಚ್ಚಿತ ಗುತ್ತಿಗೆದಾರರು ಸ್ಟಾಂಡರ್ಡ ಟೆಂಡರ ದಾಖಲಾತಿಯಲ್ಲಿರುವ ತಿಳುವಳಿಕೆ ಹಾಗೂ ಶರುತ್ತುಗಳಿಗೆ ಬದ್ದರಾಗಿರಬೇಕು.
2. ಗುತ್ತಿಗೆದಾರರು ಗುತ್ತಿಗೆಯ ದಸ್ತಾವೇಜುಗಳನ್ನು ಈ ಕೆಳಕಂಡ ಸೂಚಿ ಪಟ್ಟಿಯಲ್ಲಿ ಸೂಚಿಸಿದ ಬೆಲೆಯನ್ನು ನಗದು ಹಣ ಪಾವತಿಸಿ ಅಥವಾ **ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ,** ಇವರ ಹೆಸರಿನಲ್ಲಿ ಬೆಳಗಾವಿಯಲ್ಲಿ ಹಣ ಪಾವತಿ ಆಗುವಂತೆ ಬ್ಯಾಂಕರ್ಸ ಚೆಕ್/ಚನಲ್/ಡಿಮಾಂಡ ಡ್ರಾಫ್ಟ/ಪೇ ಆರ್ಡರ ಪಾವತಿಸಿ ಖರೀದಿಸಬಹುದು (ಫಾರ್ಮ ಬೆಲೆಯನ್ನು ಯಾವುದೇ ಕಾರಣಕ್ಕೆ ಹಿಂದಿರುಗಿಸುವುದಿಲ್ಲ).
3. ಗುತ್ತಿಗೆ ಪತ್ರದೊಂದಿಗೆ ಲಗತ್ತಿಸುವ ಎಲ್ಲಾ ದಾಖಲೆಗಳನ್ನು ಯಾವುದೆ ಹಂತದಲ್ಲಿ ಪರಿಶೀಲನೆಗಾಗಿ ಮೂಲ ದಾಖಲೆಗಳ ಅವಶ್ಯವಿದ್ದಲ್ಲಿ ಅವುಗಳನ್ನು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಗುತ್ತಿಗೆ ಪತ್ರಗಳನ್ನು ತಿರಸ್ಕರಿಸಲಾಗುವುದು.
4. ಗುತ್ತಿಗೆದಾರರು ನಮೂದಿಸುವ ದರಗಳು ಟೆಂಡರ ಸಲ್ಲಿಸುವ ದಿನಾಂಕದಿಂದ 90 ದಿನಗಳ ವರೆಗೆ ಚಲಾವಣೆಯಲ್ಲಿರತಕ್ಕದ್ದು.
5. ಸರ್ಕಾರದ ಆದೇಶ ಸಂಖ್ಯೆ ಎಲ್‌ಡಿ/300/ಎಲ್‌ಇಟಿ 2006 ದಿನಾಂಕ:23–07–2007ರನ್ವಯ ಉಪ ಖನಿಜಗಳ ರಾಜಧನ ದರಗಳನ್ನು ಅನ್ವಯಿಸಿ ಪ್ರತಿ ಬಿಲ್ಲಿನಲ್ಲಿ ರಾಜಧನಗಳನ್ನು ಕಡಿತ ಮಾಡಲಾಗುವುದು ಹಾಗೂ ಸರ್ಕಾರದ ಆದೇಶದ ಪ್ರಕಾರ ಕಾಲಕಾಲಕ್ಕೆ ಜಾರಿಗೆಯಾಗುವ ರಾಜಧನ ದರಗಳಂತೆ ರಾಜಧನಗಳನ್ನು ಕಡಿತಮಾಡಲಾಗುವುದು, ಗುತ್ತಿಗೆದಾರರು ಈ ಅಂಶವನ್ನು ಗಮನದಲ್ಲಿರಿಸಿ ತಮ್ಮ ದರಗಳನ್ನು ನಮೂದಿಸಬೇಕು.

6. ಗುತ್ತಿಗೆಗೆ ಇಟ್ಟ ಮೊತ್ತ, ಮುಂಗಡ ಠೇವಣಿ ಮೊತ್ತ ಹಾಗೂ ಗುತ್ತಿಗೆ ಕಾಲಾವಧಿಗಳಲ್ಲಿ ಬದಲಾವಣೆಯಾಗುವ ಸಾಧ್ಯತೆ ಇದ್ದು, ಖುಲ್ಲಾ ಗುತ್ತಿಗೆ ಪತ್ರದಲ್ಲಿ ನಮೂದಿಸಿರುವ ಗುತ್ತಿಗೆಗೆ ಇಟ್ಟಿರುವ ಮೊತ್ತ, ಮುಂಗಡ ಠೇವಣಿ ಮೊತ್ತ ಹಾಗೂ ಗುತ್ತಿಗೆ ಕಾಲಾವಧಿಗಳನ್ನು ಮಾತ್ರ ಪರಿಗಣಿಸಬೇಕು.

7. ಯಾವದಾದರೂ ಒಂದು ಅಥವಾ ಎಲ್ಲ ಟೆಂಡರಗಳನ್ನು ಯಾವುದೆ ಕಾರಣ ನೀಡದೆ ನಿರಾಕರಿಸುವ ಹಕ್ಕನ್ನು ವಿಶ್ವವಿದ್ಯಾಲಯ ಕಾಯ್ದಿರಿಸಿಕೊಂಡಿದೆ.

8. ಶರತ್ತುಗಳನ್ನೊಳಗೊಂಡ ಗುತ್ತಿಗೆ ಪತ್ರಗಳನ್ನು ತಿರಸ್ಕರಿಸಲಾಗುವುದು.

9. ಜಂಟಿ ಪ್ರಯತ್ನದ ಕಂಪನಿಗಳು ಟೆಂಡರಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.

10. ಗುತ್ತಿಗೆ ದಸ್ತಾವೇಜುದಲ್ಲಿರುವ ಸೆಕ್ಷನ್ 3, 5 ಹಾಗೂ 8ರಲ್ಲಿನ ಅವಶ್ಯವಿರುವ ಎಲ್ಲಾ ಮಾಹಿತಿಗಳನ್ನು ಗುತ್ತಿಗೆದಾರರು ತುಂಬತಕ್ಕದ್ದು.

11. ಗುತ್ತಿಗೆದಾರರ ವರ್ಗ 4 ರಜಿಸ್ಟ್ರೇಶನ್ನ ಪ್ರತಿ ಅಥವಾ ಅದಕ್ಕಿಂತ ಮೇಲ್ಪಟ್ಟ ರಜಿಸ್ಟ್ರೇಶನ ಪ್ರತಿ ಅರ್ಜಿ ಜೊತೆಗೆ ಲಗತ್ತಿಸಿರಬೆಕು.

12. ಪ್ಯಾನ್ ಕಾರ್ಡ ಪ್ರತಿ ಅರ್ಜಿ ಜೊತೆಗೆ ಲಗತ್ತಿಸಿರಬೆಕು.

13. ಜಿ.ಎಸ್.ಟಿ ಪ್ರತಿ ಅರ್ಜಿ ಜೊತೆಗೆ ಲಗತ್ತಿಸಿರಬೆಕು.

14. ಕಾಮಗಾರಿಯ ಸ್ಥಳದ ಭೇಟಿಯ ಪತ್ರವನ್ನು ಕಡ್ಡಾಯವಾಗಿ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು ಟೆಂಡರ ಸಲ್ಲಿಸುವುದು ಇಲ್ಲವಾದಲ್ಲಿ ಅಂತಹ ಟೆಂಡರ್‌ನ್ನು ಪರಿಗಣಿಸಲಾಗುವುದಿಲ್ಲ.

15. ಕಾಮಗಾರಿ ನಿರ್ವಹಿಸುವಾಗ ಉಂಟಾಗುವಂತಹ ಯಾವುದೇ ತಕರಾರುಗಳನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಜಿನಲ್ಲಿ ಬಗೆಹರಿಸಿಕೋಳ್ಳಬೇಕಾಗಿರುತ್ತದೆ.

16. ಗುತ್ತಿಗೆದಾರರು ಈ ಕೆಲಸಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸ್ವತ ತರಲು ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು, ಇಲಾಖೆಯಿಂದ ಯಾವುದೆ ಸಾಮಗ್ರಿಗಳನ್ನು ಪೂರೈಸಲಾಗುದಿಲ್ಲ.

**ಸಹಿ/–**

**ಕುಲಸಚಿವರು,**
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ.

**ಪ್ರತಿ:**

1) Finance Officer, Rani Channamma University, Belagavi.
2) Assistant Executive Engineer, Building Section, Rani Channamma University, Belagavi.
3) Notice Board.
4) Extra Copies.